177 (2)

Commencement of 47th Year of Publication

Regd B G No. 155

— ಶ್ರೀ —

3—9—1962

Sri "SATYAVADI"
— DAILY —
MYSORE 4
47th Year
ನೇ ವರ್ಷ

ಸತ್ಯವಾದಿ

ಸ್ಥಾಪಕರು— ಅರಮನೆ ಸಿಂಸ್ತೇದಾರ್ ಎಂ. ವಿ. ಸುಬ್ಬರಾಯರು 2 ನ ಪೈ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
"ಸತ್ಯವಾದಿ" ಯನ್ನು ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

Protect the cow
ಗೋಸಂರಕ್ಷಣೆ ಮಾಡಿ

4000 ಜನರ ಮರಣ

ಟೆಹರಾನ್ 2 — ಅತ್ಯಂತ ಕೆಟ್ಟ ಭೂಕಂಪದ ದೆಸೆಯಿಂದ 4 ಸಾವಿರಕ್ಕೆ ಮೀರಿ ಜನರು ಇರಾನ್‌ನಲ್ಲಿ ವರಣಪಟ್ಟಿರುವ ಭೀತಿಯಿದೆ ರಾತ್ರಿ ಎಲ್ಲರೂ ಮಲಗಿದ್ದರು. ದಾರೆಸ್‌ಫಾರ್ಸ್ ನಿ ಘಾಜ್ವಿನ್ ಗ್ರಾಮವೊಂದರಲ್ಲೇ 3 ಸಾವಿರ ಜನರು ಮರಣಹೊಂದಿರುವರೆಂದು ಟೆಹರಾನ್ ರೇಡಿಯೋ ವರದಿ ಮಾಡಿದೆ. ಬಂದಿರುವ ಒಂದು ವರದಿಯದತೆ ಗಾಜಿವಿನ್ ಬಳಿಯ ಗ್ರಾಮವೊಂದರಲ್ಲಿ 1000 ಜನರಲ್ಲಿ ಭೂಮಿ ಅಗೆದಾಗ 70 ಮಂದಿಯನ್ನು ಮಾತ್ರ ಸಜೀವವಾಗಿ ಹೊರಕ್ಕೆ ತೆಗೆಯಲಾಗಿದೆ.

6 ತಿಂಗಳ ಸಜ

ಹೈದರಾಬಾದು 1 — ಬಹಳ ಕಾಲದಿಂದ ನಡೆಯುತ್ತಿರುವ ಸಿವಿಲ್ ಮೊಕದ್ದಮೆಯೊಂದರ ಬಗ್ಗೆ ಬೇಸರಗೊಂಡು ಆಗಸ್ಟು 16 ರಿಂದ ನಲಗೊಂಡ ಜಿಲ್ಲೆಯಲ್ಲಿನ ಹುಜೂರು ನಗರ ನ್ಯಾಯಾಲಯದಲ್ಲಿ ಉಪವಾಸ ಮುಷ್ಕರ ಆರಂಭಿಸಿದನು ಕಂಟೆಪ್ಟ್ ಆಫ್ ಕೋರ್ಟ್ ಮೇಲೆ ಅಂಜಯ್ಯನಿಗೆ 6ತಿಂಗಳು ದಂಡನೆ ಆಯಿತು. ಅವನು ಬಂದೀಖಾನೆಯಲ್ಲಿ ಉಪವಾಸ ಮುಂದುವರಿಸುತ್ತಿರುವದಾಗಿ ವರದಿ ಆಗಿದೆ

ಹುಚ್ಚನಿಂದ ಕೊಲೆ

ನ್ಯೂಯಾರ್ಕ್ 1 — ಕ್ಲಾರ್ಕ್ ಎಂಬ ಹೆಸರಿನ ನಿಗೋ ಹುಚ್ಚಾಗಿ ಓರ್ವ ಮಹಿಳೆ ಓರ್ವ ಪೋಲೀಸನನ್ನು ಕೊಂದು ಮೂವರನ್ನು ಗಾಯಪಡಿಸಿದನು ಪೋಲೀಸರು ಅವನನ್ನು ಅಟ್ಟಿಕೊಂಡುಹೊಗಿಕೊಂದರು

ರೂ 732 ಕೋಟಿ ಅಂದಾಜಿನ ಪ್ರಕಾಲಿಯ 20 ವರ್ಷದ ಮಾಸ್ಟರ್ ಪ್ಲಾನ್ ಮೊನ್ನೆಯಿಂದ ಜಾರಿಗೆ ಬಂತು

॥ ಶ್ರೀ ॥

ಭಗವಂತನ ಕ್ಸಪೆಯಿಂದ "ಸತ್ಯವಾದಿ" ಗೆ 47 ನೆಯ ವರ್ಷ ಆರಂಭವಾಯಿತು

ಅದೆಷ್ಟು ಕ್ರಿಮಿಕೀಟಗಳು

ವಿಶ್ವದಾದ್ಯಂತ ಪ್ರತಿ ಒಂದು ಚದುರ ಮೈಲಿ ಭೂಮಿಯಲ್ಲಿ ಎರಡೂಕಾಲು ಸಾವಿರ ಮಿಲಿಯ ಕ್ರಿಮಿಕೀಟಗಳಿವೆಯೆಂದೂ, ಅಷ್ಟೇ ಸ್ಥಳದಲ್ಲಿ ವಾಯುವಿನಲ್ಲಿ 12 ಮಿಲಿಯಗಳಷ್ಟು ಇವೆಯೆಂದೂ ಒಬ್ಬ ಬ್ರಿಟಿಷ್ ನಿಪುಣನ ಅಭಿಪ್ರಾಯವಾಗಿದೆ.

ಚಿನ್ನ ವಶ

ಅಮೃತಸರ 1— 175000 ರೂಗಳ ಮೌಲ್ಯದ 13 ಕಿಲೋ ಅಕ್ರಮ ಸಾಗಾಣಿಕೆ ಚಿನ್ನವನ್ನು ಡೆಲ್ಲಿಗೆ ಹೋಗುತ್ತಿದ್ದ ಒಂದು ಕಾರಿನಿಂದ ಪೋಲೀಸರು ವಶಪಡಿಸಿಕೊಂಡು ಮೂರು ಮಂದಿಯನ್ನು ಬಂಧಿಸಿದರು.

ಜನಸಂಖೆ ಏರಿಕೆ

ನ್ಯೂಯಾರ್ಕು 1— ಪ್ರಪಂಚವು ಹೆಚ್ಚು ಹೆಚ್ಚು ಜನನಿಬಿಡವಾಗುತ್ತಿರುವುದೆಂದೂ, ಈಗಿನ ಜನಸಂಖೆಯು 1950 ರ ಜನಸಂಖೆಗಿಂತ 1/6 ರಷ್ಟು ಹೆಚ್ಚಿರುವುದೆಂದೂ ಪ್ರಕಟವಾಗಿದೆ.

ನಾಳೆಯ ಪಂಚಾಂಗ

ಆಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಸಂಪತ್ಕೃಷ್ಣ ಶಾಯಿಸರಿಂದ
4 ಪಂಚಮಿ ಸ್ವಾತಿ

ಈರ್ವರ ಮರಣ

ಬಸ್ತಿ ಜಿಲ್ಲೆಯ ತೆಸಿಲ್‌ಕಲೀಲಬಾದ್‌ನಲ್ಲಿರುವ ಧಂಗಾಟಬಾದಿನಲ್ಲಿ ಗ್ರಾಮಸ್ಥರ ಅಕ್ರಮ ಗುಂಪು ಚದುರಿಸಲು ಪೋಲೀಸರುಗುಂಡುಹಾರಿಸಲು ಈರ್ವರು ಮರಣಹೊಂದಿದರು.

ಚುನಾವಣೆ ರದ್ದು

ಬಿಹಾರು ಕಾಂಗ್ರೆಸಿನ ಚುನಾವಣೆಗಳನ್ನು ಡಿಸೆಂಬರು ಆದನಂತರ ನಡೆಯುವಂತೆ ಮುಂದುವರಿಸಿದೆ. ಮೋಸದ ಸದಸ್ಯತ್ಯ ಇರುವದೇ ಇದಕ್ಕೆ ಕಾರಣ.

ದೆಹಲಿಗೆ ಬಸ್ಸುಗಳು

ರೂ 15 ಲಕ್ಷ ವೆಚ್ಚದಲ್ಲಿ ಮದ್ರಾಸಿನ 60 ಲೀಲ್ಯಾಂಡು ಬಸ್ಸುಗಳನ್ನು ದೆಹಲಿ ಟ್ರಾನ್ಸ್ಪೋರ್ಟ್ ಕೊಳ್ಳುವದಾಗಿ ಮದ್ರಾಸ್ ಸರ್ಕಾರದ ಸಂಗಡ ಒಪ್ಪಂದ ಮಾಡಿಕೊಂಡಿದೆ.

★

ಬೊಂಬಾಯಿ — ನೂರು ರೂಗಳ ಖೋಟಾ ನೋಟುಗಳನ್ನು ತಯಾರಿಸಿ ಅವುಗಳನ್ನು ಬೊಂಬಾಯಿ ಮತ್ತು ಗುಜರಾತುಗಳಲ್ಲಿ ಪ್ರಸಾರ ಮಾಡುತ್ತಿರುವ ಒಂದು ತಂಡವನ್ನು ಪೋಲೀಸರು ಪತ್ತೆ ಮಾಡಿರುವರು. ಹತ್ತು ಜನರು ಬಂಧಿತರಾದರು.

ಜಮ್ಮು — ಇಲ್ಲಿಗೆ 56 ಮೈಲಿಗಳ ದೂರದಲ್ಲಿ ಚಾಂಬು ಭಾಗದಲ್ಲಿ ಪಾಕಿಸ್ತಾನ ಸೇನೆಗಳು ಮತ್ತೆ ಗುಂಡುಹಾರಿಸಿವೆ

ಲಂಡನ್ 2 — ಶುಕ್ರಗ್ರಹಕ್ಕೆ ಕ್ಷಿಪಣಿಯನ್ನು ಕಳಿಸಲು ರಷ್ಯ ಪ್ರಯತ್ನಿಸಬಹುದು.

ಕೊಯಮುತ್ತೂರಿಗೆ 30 ಮೈಲಿಗಳ ದೂರದಲ್ಲಿ ಪುಂಗ್ಲೂರಿನಲ್ಲಿ ಅಸ್ಫೋಟನೆ ದೆಸೆಯಿಂದ ಓರ್ವ ಮಹಿಳೆ ಸೇರಿ 7 ಜನ ಮರಣಹೊಂದಿದರು.

ಜಕಾರ್ತದಲ್ಲಿ ಈ ದಿನ ಭಾರತ-ಪಾಕಿಸ್ತಾನಗಳಲ್ಲಿ ಫೈನಲ್ ಹಾಕಿ ಪಂದ್ಯ ನಡೆಯುವದು

ಕ್ಯೂಬಾಕ್ಕೆ ಆಯುಧ ಕಳಿಸಲು ರಷ್ಯ ಒಪ್ಪಿದೆ

ನಾಳೆ ಸತ್ಯವಾದಿ ಕಚೇರಿಗೆ ರಜ ಎದೆ.

ಪ್ರವಾಹದ ಹಾವಳಿ

ಗೋರಖಪುರ 1— ಹತ್ತಾ ತಾಸಿಲಿನಲ್ಲಿ 200 ಗ್ರಾಮಗಳ ನಿ ನಾ ಶ ಮ ವಾದವು.

೦ ೦ ೦ ೦

ಡಾಕಾ 1— ಪೂರ್ವ ಪಾಕಿಸ್ತಾನದಲ್ಲಿ ಪ್ರವಾಹ ಪರಿಸ್ಥಿತಿ ಅರಿಯಲು ಬಂದ ಅಧ್ಯಕ್ಷ ಅಯೂಬರು– ನದಿಗಳು ಭಾರತ ರಾಜ್ಯದಲ್ಲಿ ಬಿಟ್ಟಗಳಲ್ಲಿ ಹುಟ್ಟುವ ಸ್ಥಳಗಳಲ್ಲೆ ಅಡ್ಡಪಡಿಸಲ್ಪಡಬೇಕು, ಎಂದು ಮುದ್ದಿಗಾರರಿಗೆ ಹೇಳಿದರು.

೦ ೦ ೦ ೦

ಪಾಟ್ನಾ 1— ಬಿಹಾರಿನ ಮುಜಾಫರಪುರ ಮತ್ತಿತರ ಜಿಲ್ಲೆಗಳಲ್ಲಿ ನೆರೆ ಹಾವಳಿಯಿಂದ 26 ಲಕ್ಷ ಜನ ತೊಂದರೆಗೀಡಾಗಿದ್ದಾರೆ — 200 ಮನೆ ಮತ್ತು 2000 ಜನಸಂಖ್ಯೆಯ ಲಡ್ಡಾರಾ ಗ್ರಾಮವು ಕೊಚ್ಚಿ ಹೋಗಿದೆ.

೦ ೦ ೦ ೦

ಡಾಕಾ 1— ಪೂರ್ವ ಪಾಕಿಸ್ತಾನದಲ್ಲಿ ನೆರೆಹಾವಳಿಯಿಂದ 100 ಮಂದಿಗೆ ಮೇಲ್ಪಟ್ಟು ಸತ್ತಿರುವರೆಂದೂ, 8000 ಚದರುಮೈಲಿ ಭೂಮಿ ಮುಳುಗಡೆಯಾಗಿರುವುದೆಂದೂ, ಭತ್ತದ ಬೆಳೆಯೆಲ್ಲಾ ನಾಶವಾಗಿಡೆಯೆಂದೂ, 20000 ದನಕರುಗಳು ಮೃತಪಟ್ಟವೆಯೆಂದೂ ವಂದಿಯಾಗಿದೆ.

೦ ೦ ೦ ೦

ಬೆಂಗಳೂರು 1— ಅಂಕಾವತಿ ನದಿಯ ಪ್ರವಾಹದಿಂದ ರಾಮನಗರ ತಾಲ್ಲೂಕಿನ ದಡಗಳಲ್ಲೆಲಾ ಶುಂಬಾ ನಷ್ಟವಾಗಿದೆ ; ಭಾರಿ ಗಿಡಗಳೂ ಎಲೆಕ್ಟ್ರಿಕ್ ಕಂಭಗಳೂ ಬುಡ ಸಹಿತ ಬಿದ್ದು ಕೊಚ್ಚಿಹೋದವು : ಅನೇಕ ಸೇತುವೆಗಳು ಅನುಪಯೋಗವಾಗಿವೆ ; 37 ಸಂಸಾರಂಗಳು ನಿರಾಶ್ರಿತಗೊಂಡಿವೆ.

**

ಡಿ ಎಂ ಕೆ

ಮದರಾಸು 1— ಸ್ವತಂತ್ರ ಪಾರ್ಟಿಯ ನಾಯಕ ಶ್ರೀ ರಾಜಗೋಪಾಲಾಚಾರಿಯವರು ರಾಷ್ಟ್ರೀಯ ಸಮಿತಿಯ ಪಾರ್ಲಿಮೆಂಟೀಯ ಠರಾವಿಟ ಮುಂದೆ ಸಾಕ್ಷ್ಯ ಕೊಡಲು ನಿರಾಕರಿಸಿದರು .... ಸಾಕ್ಷ್ಯವಿಶ್ವವರೆಲ್ಲಾ, ರಾಷ್ಟ್ರದಿಂದ ಜೇರ್ಪಡುವ ಹಕ್ಕು ಯಾವ ವ್ಯಕ್ತಿಗೂ ಪಾರ್ಟಿಗೂ ಇಲ್ಲವೆಂದೂ ಹಾಗೆ ಬೋಧಿಸುವವರು ದೇಶದ್ರೋಹಿಗಳೆಂದು ರಾಜ್ಯಾಂಗದಲ್ಲಿ ಇಂಜೀಕೆಂದೂ ಹೇಳಿದರು .... ಸಾಕ್ಷ್ಯವಿಶ್ವ 5 ಮಂದಿಯೂ, ಡಿ ಎಂ ಕೆ ಅಂತಹ ತೀವ್ರ ಚಳವಳವಲ್ಲವೆಂದೂ ಅದು ಶಸ್ತ್ರಕ್ಕೆ ತಾನೇ ಸತ್ತುಹೋಗುವುದೆಂದೂ ಹೇಳಿದರು .... ಶಾಲೆಗಳ ಮೇಲೆ ಹಿಂದಿಯನ್ನು ಒತ್ತಾಯಪಡಿಸಬಾರದೆಂದೂ, ಇಂಗ್ಲೀಷು ಇರಬೇಕೆಂದೂ ಹೇಳಿದರು .... ಮದರಾಸು ಅರ್ಥ ಮಂತ್ರಿ ಶ್ರೀ ಭಕ್ತವತ್ಸಲಂ ಕೊಟ್ಟ ಸಾಕ್ಷ್ಯದಲ್ಲಿ– ಡಿ ಎಂ ಕೆ ಮೇಲೆ ಪೂರ್ಣ ನಿಷೇಧ ಬಾರದೆಂದೂ, ಹಾಗೆ ಮಾಡಿದರೆ ಅದಕ್ಕೆ ಹೆಚ್ಚು ಪ್ರಾಮುಖ್ಯತೆ ಮತ್ತು ಹುತಾತ್ಮರ ಉನ್ನತ ಗೌರವ ಕೊಟ್ಟಂತಾಗುವುದೆಂದೂ, ರಾಜ್ಯ ಸಭೆಗಳು ಮತ್ತು ಪಾರ್ಲಿಮೆಂಟಿನ ಚುನಾವಣಾ ಮನ್ನಣೆ ವಾಪಸ್ಸು ತೆಗೆಕೊಳ್ಳುವುದು ಅವಶ್ಯವೆಂದೂ ಹೇಳಿದರು : ಹಾಗೇ ಪ್ರತ್ಯೇಕ ಮನೋಭಾವದ ಎಲ್ಲಾ ಪಕ್ಷಗಳ ಮೇಲೂ ಹೀಗೆ ಮಾಡಬೇಕೆಂದರು.

Help The 'Gorakshana'

"ಗೋರಕ್ಷಣ" ಪತ್ರಿಕೆಗೆ ಬೆಂಬಲಿಗರಾಗಿರಿ

ಗೋಕ್ಷಣೆ, ಪಾಣಿವಯೆ, ಪಶುವೆದ್ಯ, ಶಾಕಾಹಾರ ವಿಚಾರಂಗಳಂದ ಕೂಡಿದ ಏಕೈಕ ಕನ್ನಡ ಪತ್ರಿಕೆ.

ಪತ್ರಿಕೆ ಉಚಿತ; ಅಂಚೆ ವೆಚ್ಚಕ್ಕಾಗಿ ವರ್ಷಕ್ಕೆ 30 ನಯೆ ಪೈಸೆ

ಗೋರಕ್ಷಣ ಪತ್ರಿಕೆಗೆ ಸಹಾಯದ್ರವ್ಯ ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ – ಗೋರಕ್ಷಣ ಆಫೀಸ್, ಚಾಮರಾಜಪುರಂ ಮೈಸೂರು 4

ವುಡ್‌ಲಾಂಡ್ಸ್ ಶಿ ನ್ಮ

31–8–62 ರಿಂದ ಅಮೋಘ ಆರಂಭ

ನಯಿ ಮಾ (ಹಿಂದಿ) NAI MAA

ಪಾತ್ರ— ಬಾಲರಾಜ್ ಸಹಾನಿ, ಶ್ಯಾಮ, ಡೈಸಿ ಇರಾನಿ, ಪೀಪ್ ಕನಿವಾಲ್

ಸಕಲರೂ ನೋಡಿ ಆನಂದಿಸಬೇಕಾದ ಅಮೋಘ ಸಾಂಸಾರಿಕ ಚಿತ್ರ

ದಿನವಹಿ 3 ಪ್ರದರ್ಶನಗಳು

ಆಪೆರಾ— ಕೀರ್ತಿಯುತ 4ನೇ ವಾರ

ಧರ್ಮಸೆಳೆ ಮಹಾತೆ [ಕನ್ನಡ]

ತಾರಾಗಣ — ಪ್ರತಿಮಾದೇವಿ, ಅಂಜು, ಡಿಕ್ಕಿ ಮಾಧವರಾವ್

ದಿನವಹಿ 3 ಆಟಗಳು



ಅಮೋರಿಕಾಕ್ಕೆ ಭೇಟಿ ಸಂಬಂಧದ ಚಿತ್ರಗಳು

Edited, Printed & Published by the Proprietor, Dharma Sanchara Nirata M. S. Krishna Rao. at the Satyavadi Press, Chamarajapuram, Mysore. 4